ಶ್ರೀ ರಾವ ಕೃಷ್ಣ ಹೆಗ್ಗಡೆ.—ಉದ್ದೇಶವೇನೂ ಆಗಿಲ್ಲ. ಈಗಾಗಲೇ ಒಂದು ನಿರ್ಣಯ ಪಾಸಾಗಿ ಹಣ ಮಂಜೂರು ಆಗಿದೆ. ಅದಕ್ಕಾಗಿ ತಾಲ್ಲೂಕು ಬೋರ್ಡಿನವರು ಕೆಲವು ಅನುಕೂಲತೆಗಳನ್ನು ಒದಗಿಸಿಕೊಡಬೇಕು. ಹೆಚ್ಚಿ ಡಿವಾಟ್ರೈಮೆಂಟಿನವರು ಇಂಥಿಂದ ಅನುಕೂಲತೆಗಳನ್ನು ಒದಗಿಸಿ ಕೊಡಲು ಸಾಧ್ಯವೇ ಎಂದು ಕೇಳಿದ್ದಾರೆ.

Number of Candidates selected by Government for Post-Graduate studies in M.Sc. in the year 1963—1964.

*Q.—86. Sri ANDANAIH (Kunigal).—

Will the Government be pleased to state :—

(*a*) the number of candidates that have been selected by Government for the post-Graduate studies in M.Sc., (Physics, Mathematics and Chemistry) in the year 1963 and 1964. (Community-war information may be furnished) ;

(*b*) the guiding principles adopted while selecting candidates for the above course ?

*A.—Sri S. R. KANTHI (Minister for Education).—

(*a*) *Vide* Statement appended.

(*b*) The guiding principles for selecting candidates is 'Merit' as shown by the marks obtained by the candidates in Major Subjects at the B.A./B.Sc. Examination. However, reservation is made to the Scheduled Castes and Scheduled Tribes students in Mysore University and Central College, Bangalore. The Karnatak University are giving preference to the graduates of that University and are making admissions on the basis of merit.

(SRI S. R. KANTHI)

STATEMENT

Showing the number of students admitted to Junior M. Sc., during 1963-64 and 1964-65 (Physics, Chemistry and Mathematics).

1. Central College, Bangalore.—

S.No.	Community	Physics		Chemistry		Mathematics	
		1963-64	1964-65	1963-64	1964-65	1963-64	1964-65
1	2	3	4	5	6	7	8
1	Scheduled Castes Scheduled Tribes	1	Nil	Nil	Nil	Nil	Nil
2	and others.	38	32+7	31	24+7	45	38+7
	Total ...	39	39	31	31	45	45

+ indicates deputed teachers admitted.

2. Karnatak University, Dharwar.—

	1963	*1964*
Physics	38	35
Chemistry	62	64
Mathematics	22	38
	115	137

Community-wise information is not available with the Karnatak University, since no provision is made in the application form for admission to indicate the community of the students, as the admissions are made on the basis of merit, preference being given to the graduates of the Karnatak University, Dharwar.

3. *Mysore University, Mysore.*

S. No.	Community	Physics		Chemistry		Mathematics	
		1963-64	1964-65	1963-64	1964-65	1963-64	1964-65
1	2	3	4	5	6	7	8
1	Scheduled Castes, Scheduled Tribes and	—	1	—	—	—	—
2	Others	8	16	16	24	34	32
	Total ...	8	17	16	24	34	32

ಶ್ರೀ ಅಂದಾನಯ್ಯ.—ಎಂ. ಎಸ್‌ಸಿ. ಸ್ನಾತಕೋತ್ತರ ವ್ಯಾಸಂಗಕ್ಕಾಗಿ ಸರ್ಕಾರದವರು ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ವಿಚಾರವಲ್ಲಿ ಒಂದೇ ಕೋಮಿನವರಿಗೆ ಹೆಚ್ಚು ಅವಕಾಶವನ್ನು ಕೊಟ್ಟು ಇತರೆಯವರಿಗೆ ಅಷ್ಟು ಅವಕಾಶ ಕೊಡುವೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

† ಶ್ರೀ ಎಸ್. ಆರ್. ಕಂಠಿ—ಇದರಲ್ಲಿ ಒಂದನೆಯದು ಮೆರಿಟ್‌ಮೇರೆ ತೆಗೆದುಕೊಳ್ಳುತ್ತಾರೆ. ಇನ್ನು ಬೇರೆ ಯಾವ ರೀತಿಯಿಂದಲೂ ತೆಗೆದುಕೊಳ್ಳುತ್ತಾ ಇಲ್ಲ. ಎರಡನೆಯದು ಆ ಸೆಲೆಕ್ಷನ್ ಮಾಡುವವರು ಯೂನಿವರ್ಸಿಟಿಯವರು. ಅದು ಅಷ್ಟಾಗಿ ಸರ್ಕಾರಕ್ಕೆ ಸಂಬಂಧಪಟ್ಟಿಲ್ಲ.

Sri G. V. GOWDA.—It is admitted that community-wise information is not available in respect of the Karnatak University. May I know if it is available in respect of the Mysore University and the Central College ?

ಶ್ರೀ ಎಸ್. ಆರ್. ಕಂಠಿ.—ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಆ ರೀತಿ ಇದೆಯೇ ಇಲ್ಲವೇ ಎಂದು ಹೇಳುವುದಕ್ಕಾಗುವುದಿಲ್ಲ. ಕಮ್ಯೂನಿಟಿವೈಜ್ ಇನ್‌ಫರ್‌ಮೇಷನ್ ಅವರು ಕೊಟ್ಟಿಲ್ಲ. ಕರ್ನಾಟಕ ಯೂನಿವರ್ಸಿಟಿಯವರು ಕಮ್ಯೂನಿಟಿವೈಜ್ ಇನ್‌ಫರಮೇಷನ್ ತರಿಸುವುದಕ್ಕಾಗುವುದಿಲ್ಲ ವೆಂದು ಹೇಳಿದ್ದಾರೆ.

ಶ್ರೀ ಎಸ್. ಕರಿಯಪ್ಪ.—ಹಳೆಯ ಮೈಸೂರು ಪ್ರದೇಶದ ಉಪಾಧ್ಯಾಯರುಗಳನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೂ ಮತ್ತು ಉತ್ತರ ಕರ್ನಾಟಕದ ಶಾಲೆಗಳ ಉಪಾಧ್ಯಾಯರನ್ನು ಕರ್ನಾಟಕ ಯೂನಿವರ್ಸಿಟಿಗೂ ಎಂ. ಎ. ಮತ್ತು ಎಂ. ಎಸ್‌ಸಿ. ಪರೀಕ್ಷೆಗಳಿಗೆ ಕಳುಹಿಸುತ್ತಿದ್ದಾರಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಸಾಮಾನ್ಯವಾಗಿ ಹಾಗೆಯೇ ಕಳುಹಿಸಲಾಗುತ್ತದೆ. ಕೆಲವು ಕಡೆಗಳಲ್ಲಿ ಹಾಗೆ ಕಟ್ಟುನಿಟ್ಟಾಗಿ ಅನ್ವಯಿಸುವುದಕ್ಕಾಗುವುದಿಲ್ಲ. ಸಬ್ಜಕ್ಟ್‌ವೈಜ್ ಡಿಸ್ಟ್ರಿಬ್ಯೂಷನ್ನಿನಲ್ಲಿ ಅಲ್ಲಿಂದ ಇಲ್ಲಿಗೆ ಮತ್ತು ಇಲ್ಲಿಂದ ಅಲ್ಲಿಗೆ ಕಳುಹಿಸಬೇಕಾಗುತ್ತದೆ.

ಶ್ರೀ ಎಸ್. ಕರಿಯಪ್ಪ.—ಆ ರೀತಿ ಕಳುಹಿಸುವಾಗ ಮೇಜರ್ ಸಬ್ಜಕ್ಟುಗಳಲ್ಲಿ ಯಾರು ಪಾಸ್ ಮಾಡುತ್ತಾರೋ ಅಂತಹವರಿಗೆ ಆಯಾ ಸಬ್ಜಕ್ಟುಗಳಿಗನುಗುಣವಾಗಿ ಮೆರಿಟ್ ಎಂಬುದನ್ನು ಡೀವಿಯೇಟ್ ಮಾಡಿರುವ ಇನ್‌ಸ್ಟ್ರನ್ಸ್ ಇಲ್ಲವೇ ?